ಶ್ರೀ ಕೆ.ಎಚ್.ಹನುಮೇಗೌಡ: ನೀವು ಔಷಧಿ ತೆಗೆದುಕೊಂಡು ಬಂದು ಇಲ್ಲಿ ಕುಳಿತಿದ್ದೀರಲ್ಲ, ಅಷ್ಟೇಸಾಕು. ಅದು ಹೋಗಲಿ ಬಿಡಿ. ಏತಕ್ಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನಾನು ಅವನಿಗೆ ಹೇಳಿದೆ, ನೀನು ಹಾಸನದಲ್ಲಿ ಹೋಗಿ ಕೇಳು ಏನಾಯಿತು, ಎಂತಾಯಿತು? ಜನರು ಹೇಗೆ ಸರ್ವನಾಶವಾಗಿ ಹೋದರು? ಎಷ್ಟೊಂದು ಪೀಡೆ ಕಾಟ ನಮಗೆ ಇತ್ತು ಎಂದು ಹೋಗಿ ಅಲ್ಲಿ ಕೇಳು ಎಂದು ಹೇಳಿದೆ. ಜನರು ಏನು ತಿಳಿದುಕೊಂಡಿದ್ದಾರೆಂದರೆ ಸೂಪರ್‌ಶಕ್ತಿ ಎಂದು ತಿಳಿದುಕೊಂಡು ಹಾಗೆಲ್ಲಾ ಮಾತನಾಡುತ್ತಾರೆ. ಅದು ಬಿಡಿ ಹೋಗಲಿ. ನಮಗೆ ಇಲ್ಲಿ ಕುಳಿತು ಕೊಂಡು ಇವರು ಹೇಳುವುದಕ್ಕೆ ಬಂದಿದ್ದಾರೆ. ಇವರು ಸಂತೋಷಪಡ ಬೇಕು, ಕೊನೆಯಪಕ್ಷ ಹನುಮೇಗೌಡರಾದರೂ ಹೇಳಿದರಲ್ಲ ಎಂದು. ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಬರಗಾಲ ಪ್ರದೇಶ ಇದೆಯೋ, ನೀರು ಅವೈಲಬಿಲಿಟಿ ಇದೆಯೋ, ಅಲ್ಲಿ ಫಸ್ಟ್ ಪ್ರಯಾರಿಟಿಮೇಲೆ ಆ ಪ್ರಾಜೆಕ್ಟ್‌ಗಳನ್ನು ಸ್ಯಾಂಕ್ಷನ್ ಮಾಡಿಸಿ ಜನಗಳನ್ನು ಕ್ಷಾಮದ ದವಡೆಯಿಂದ ಬಿಡುಗಡೆ ಮಾಡಬೇಕೆಂದು ಹೇಳಿ, ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಮಾನ್ಯ ಅಧ್ಯಕ್ಷರಿಗೆ ವಂದಿಸುತ್ತೇನೆ. ನಾನೇನು ಇಲ್ಲಿ ಆವೇಶದಲ್ಲಿ ಮಾತನಾಡಿದ್ದರೆ ಆ ಜನಗಳ ನೋವನ್ನು ನಾನು ಎಕ್ಸ್‌ಪ್ರೆಸ್ ಮಾಡಿದ್ದೇನೆಯೇ ವಿನಹಾ ಇದು ನನ್ನ ಸ್ವಂತದ್ದಲ್ಲ. ನನಗೇನೂ ಆಗಬೇಕಾಗಿಲ್ಲ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಛೇರ್ಮನ್:- ಈಗ ಸದನವನ್ನು ಮುಂದೂಡುತ್ತೇನೆ ಮತ್ತೆ ಸದನ 2-30 ಗಂಟೆಗೆ ಸೇರುತ್ತದೆ. (ಸಭೆಯು 1-13ಗಂಟೆಗೆ ಮು8ಕ್ತಾಯಗೊಂಡಿತು. ಮತ್ತೆ ಸದನವು 2-30 ಗಂಟೆಗೆ ಸಮಾವೇಶಗೊಳ್ಳಲಿದೆ)

**:ಸಭೆಯು ಪುನಹ 2-50 ಕ್ಕೆ ಸಮಾವೇಶಗೊಂಡಿತು:**

ಅಧ್ಯಕ್ಷರು ಪೀಠವನ್ನು ಅಲಂಕರಿಸಿದ್ದರು:

**ಪ್ರ ಕ ಟ ಣೆ**

**ಅಧ್ಯಕ್ಷರು:** ದಿನಾಂಕ: 29-10-1999ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯಲ್ಲಿ ವಿಧಾನ ಸಭೆಯ ಕಾರ್ಯಕಲಾಪಗಳನ್ನು ದಿನಾಂಕ:30-10-1999ರಂದು ನಡೆಸಿ ತದ ನಂತರ ದಿನಾಂಕ: 11 ಮತ್ತು 12ನೇ ನವೆಂಬರ್ 1999 ರಂದು ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಲಾಗಿರುತ್ತದೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಬಿ.ಎಸ್.ಸಿ. ಸಭೆಯು ಇಂದು ಇದ್ದ ಬಗ್ಗೆ ವಿರೋಧ ಪಕ್ಷದ ನಾಯಕರಿಗೆ ಯಾವುದೇ ಸ್ಪಷ್ಟವಾದ ಮಾಹಿತಿಯನ್ನು ಕೊಟ್ಟಿಲ್ಲ. ನನ್ನ ಸಹಿಯನ್ನು ಸಹ ತೆಗೆದುಕೊಂಡಿಲ್ಲ. ಇನ್ನು ಮುಂದೆ ಆ ರೀತಿ ಲೋಪ ಆಗಬಾರದು.

**ಅಧ್ಯಕ್ಷರು:** ತಮಗೆ ಹೇಳಿತ್ತಲ್ಲವೆ ತಮ್ಮ ಪಕ್ಷದ ಉಪನಾಯಕರಾದ ಮಾನ್ಯ ಸದಾನಂದಗೌಡರು ಬಂದಿದ್ದರಲ್ಲ.

**ಶ್ರೀ ಜಗದೀಶ್ ಶೆಟ್ಟರ್:** ನನಗೆ ಅದರ ಬಗ್ಗೆ ಯಾವುದೇ ಮಾಹಿತಿ ಬಂದಿಲ್ಲ. ಇಂಥ

ಲೋಪ ಯಾವಾಗಲೂ ಆಗಬಾರದು.

**ಅಧ್ಯಕ್ಷರು:** ಆದರ ಬಗ್ಗೆ ಗಮನ ಹರಿಸುತ್ತೇನೆ. ಈಗ ಮಾನ್ಯ ಬನ್ನಿ ಕೋಡ್‌ರವರು ಮಾತನಾಡಿ. ಮಾನ್ಯ ರಾಜ್ಯ ಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾಪದ ಮೇಲಿನ ಚರ್ಚೆ.

ಶ್ರೀ ಬಿ.ಹೆಚ್. ಬನ್ನಿ ಕೋಡ್: (ಹಿರಿರೆರೂರು) ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರ ಭಾಷಣವನ್ನು ನಾನು ವಿರೋಧಿಸುತ್ತೇನೆ, ಮಾನ್ಯ ರಾಜ್ಯಪಾಲರ ಭಾಷಣ ಏನಿದೆ ಇದರಲ್ಲಿ ಎಲ್ಲಾ ವಿಷಯಗಳಲ್ಲೂ ಸಹ ಎಲ್ಲರಿಗೂ ಒಳ್ಳೆಯದನ್ನೇ ಮಾಡುತ್ತೇವೆಂದು ಹೇಳಿದ್ದಾರೆ; ನೀರಾವರಿ, ವಿದ್ಯುತ್, ರಸ್ತೆ, ಹರಿಜನ ಮತ್ತು ಗಿರಿಜನ, ಬಡವರು ಎಲ್ಲರಿಗೂ ಒಳ್ಳೆಯದನ್ನು ಮಾಡುತ್ತೇವೆಂದು ಹೇಳಿದ್ದಾರೆ. ಆದರೆ ಅವರಿಗೆ ನಿರ್ದಿಷ್ಟವಾದಂಥ, ನಿಖರವಾದಂಥ, ಸ್ಪಷ್ಟವಾದಂಥ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಿ ನಿಗಧಿತವಾದ ವೇಳೆಯಲ್ಲಿ ಯಾವ್ಯಾವ ಕಾರ್ಯಕ್ರಮಗಳಿಗೆ ಆಧ್ಯತೆಯನ್ನು ಕೊಟ್ಟು ಮಾಡಬೇಕು ಎಂಬ ನಿರ್ಣಯಕ್ಕೆ ಅವರು ಬಂದಂತೆ ಕಾಣುವುದಿಲ್ಲ. ಏಕೆಂದರೆ ಮಾಡುತ್ತೇವೆ, ಬಡವರು, ಕೂಲಿ ಕಾರ್ಮಿಕರು, ರೈತರು, ಕೊಳಚೆ ನಿವಾಸಿಗಳು ಎಲ್ಲರ ಬಗ್ಗೆ ಪ್ರತಿಯೊಂದನ್ನು ಮಾಡುತ್ತೇವೆ ಎಂದು ಹೇಳಿದ್ದಾರೆ. ಅದಕ್ಕೆ ಆದ್ಯತ್ಯ ಎಂಬುದೇ ಇಲ್ಲ. ಬಳ್ಳಾರಿ ಜಿಲ್ಲೆಗೆ 3300 ಕೋಟಿ ರೂಪಾಯಿಗಳ ಯೋಜನೆ ಕೊಡುತ್ತೇವೆಂದು ಏನು ಹೇಳಿದ್ದಾರೆ ಅದೇ ರೀತಿ ಇದರಲ್ಲೂ ಸಹ ನಿಗಧಿತವಾದ ವೇಳೆಯಲ್ಲಿ ಮಾಡಬೇಕಾದ ನೀರಾವರಿ ಕೆಲಸಗಳು, ಎರಡು ಸಾವಿರ ಇಸವಿಯೊಳಗೆ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ನೀರಾವರಿ ಯೋಜನೆಯನ್ನು ಪೂರ್ಣ ಮಾಡತಕ್ಕದ್ದು ಸರ್ಕಾರ ಬದ್ದವಾಗಿದೆಯೇ? ಹಾಗೆ ಬದ್ಧವಾಗಿದ್ದರೆ ಅದಕ್ಕೆ ಹಣಕಾಸಿನ ಕೊರತೆ ಇದ್ದರೆ ಯಾವ ರೀತಿಯಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಬೇಕು? Mobilisation of resources ಬಗ್ಗೆ ಏನು ಮಾಡುತ್ತೀರಿ? ಎಷ್ಟು ಹಣವನ್ನು ಖರ್ಚು ಮಾಡಿ ಯಾವ ಅವಧಿಯಲ್ಲಿ ಅತ್ಯಂತ ಅವಶ್ಯಕವಾಗಿರತಕ್ಕ, ಇಡೀ ರಾಜ್ಯದ ಸಮಸ್ಯೆಯಾಗಿರುವ ನೀರಾವರಿ ಯೋಜನೆಗೆ ಈ ಸರ್ಕಾರದ ಆದ್ಯತೆ ಏನು? ಅನಂತರ ವಿಕೇಂದ್ರೀಕರಣದ ಬಗ್ಗೆ ಆದ್ಯತೆಯನ್ನು ಕೊಡುತ್ತೇವೆ, ಸಂಪನ್ಮೂಲವನ್ನು ಕ್ರೋಢೀಕರಿಸುತ್ತೇವೆ ಎಂದು ಹೇಳಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಚಿವರುಗಳು ಇಲ್ಲಿ ವಿರೋಧ ಪಕ್ಷದಲ್ಲಿ ಕುಳಿತುಕೊಂಡು ಏನೇನು ಹೇಳಿದ್ದರೋ, ಚುನಾವಣಾ ಪ್ರಣಾಳಿಕೆಯಲ್ಲಿ ಏನೇನು ಹೇಳಿದ್ದರೋ ಆ ಬಗ್ಗೆ ಮಾನ್ಯ ರಾಜ್ಯಪಾಲರ ಭಾಷಣ ತಯಾರು ಮಾಡುವಾಗ ಅವರಿಗೆ ಸಂಕೋಚದ ಮನೋಭಾವ ಅಲ್ಲಿ ಬಂದಿರಬೇಕು; ನಾವು ಯಾವುದಾದರೂ ಕಾರ್ಯಕ್ರಮದ ಬಗ್ಗೆ ಹೇಳುವುದನ್ನು ಬಿಟ್ಟರೆ, ಆದ್ಯತೆ ವಿಷಯ ಇಲ್ಲ, ಆ ವಿಷಯವನ್ನು ಬಿಟ್ಟುಹೋದರೆ ನಾವು ಇನ್ನೂ ಮೊನ್ನೆ ಮೊನ್ನೆ ವಿರೋಧ ಪಕ್ಷದಲ್ಲಿ ಕುಳಿತು ಟೀಕೆ ಮಾಡಿದ್ದೇವೆ; ಈ ವಿಚಾರವನ್ನು ಪ್ರಸ್ತಾಪ ಮಾಡಲಿಲ್ಲವೆಂದರೆ ಹೇಗೆ ಎಂಬ ಮಾನಸಿಕವಾದಂಥ ಒತ್ತಡದ ಮೇಲೆ ಮಾನ್ಯ ರಾಜ್ಯಪಾಲರ ಭಾಷಣವನ್ನು ತಯಾರು ಮಾಡಿದ್ದಾರೆ ಎಂದು ಅನ್ನಿಸುತ್ತದೆ. ಈ ಸರ್ಕಾರಕ್ಕೆ ತನ್ನದೇ ಆದಂತಹ ಕಾರ್ಯಕ್ರಮ ಇಲ್ಲ. ನಿಶ್ಚಿತವಾದಂತಹ ಅವಧಿಯಲ್ಲಿ ಅದಕ್ಕೇನು ಹಣಕಾಸು ಬೇಕೋ ಅದನ್ನು ಕ್ರೋಢೀಕರಿಸುತ್ತೇವೆ ಎಂಬ ಬಗ್ಗೆ ಯಾವುದರಲ್ಲೂ ಸ್ಪಷ್ಟವಾಗಿ ಹೇಳಿಲ್ಲ. 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ ನಾವು ಎಲ್ಲವನ್ನೂ ಮಾಡುತ್ತೇವೆ ಎಂದು ಹೇಳಿದ್ದಾರೆ. Jack of all, master